

ಘಟಕಗಳಾದ ಅಣುಗಳ (ಮಾಲಿಕ್ಯೂಲ್ಸ್), ಇಲ್ಲವೇ ಅಣುವೊಂದರ ಪರಮಾಣುಗಳಲ್ಲಿನ (ಆಟಂಸ್) ಎಲೆಕ್ಟ್ರಾನುಗಳ ಕಂಪನ ಸ್ಥಿತಿಯಲ್ಲಿ ಬದಲಾವಣೆಯಾದಾಗ ಬೆಳಕು ಜನಿತವಾಗುತ್ತದೆ. ಮಾನವನೂ ಸೇರಿದಂತೆ ಬಹುತೇಕ ಭೂಜೀವಿಗಳ ಅಸ್ತಿತ್ವಕ್ಕೆ ಬೆಳಕು ಅತ್ಯಗತ್ಯ. ಬೆಳಕಿಲ್ಲದ ಭೂಮಿ ಅಂಧಕಾರದ ಬರಡು ಕೂಪವಾಗಿರುತ್ತದೆ.

ಬೆಳಕನ್ನು ಕ್ಷಣಕಾಲ ಉತ್ಪಾದಿಸುವ ಬಿರುಸು ಬಾಣಗಳೇನೋ ರಾತ್ರಿಯ ವೇಳೆ ಕ್ಷಣಕಾಲ ನಯನಮನೋಹರವಾಗಿ ಕಾಣುತ್ತವಷ್ಟೆ. ಆದರೆ ಬೆಳಕನ್ನು ಸ್ವತಃ ತಾನೇ ಉತ್ಪಾದಿಸಿ ಜಗತ್ತಿಗೆ ನಿರಂತರವಾಗಿ ಚಿಮ್ಮುವ ಸೂರ್ಯನೆಂಬ ನಕ್ಷತ್ರ ಭೂಮಿಗೆ ಜೀವನಾಧಾರವಾಗಿದೆ. ಹಗಲಿನಲ್ಲಿ ಸೂರ್ಯನ ಬೆಳಕು ಭೂಮಿಯನ್ನು ಬೆಳಗಿದರೆ, ರಾತ್ರಿಯ ವೇಳೆ ಚಂದ್ರನಿಂದ ಪ್ರತಿಫಲಿತವಾಗುವ ಚಂದ್ರನ ಬೆಳಕು ಭೂಜೀವಿಗಳಿಗೆ ಆಧಾರವಾಗಿರುತ್ತದೆ. ಇದಕ್ಕೆ ಹೋಲಿಸಿದಲ್ಲಿ ಗ್ರಹಗಳಿಂದ ಪ್ರತಿಫಲಿತವಾದ ಹಾಗೂ ದೂರದ ನಕ್ಷತ್ರಗಳಿಂದ ಜನಿತವಾದ ಬೆಳಕು ಮಾನವನ ಚಟುವಟಿಕೆಗಳಿಗೆ ಹೆಚ್ಚು ಉಪಯುಕ್ತವಾಗಿರುವುದಿಲ್ಲ. ಆದರೆ ಬೆಳಕಿನ ಚುಕ್ಕಿಗಳಂತೆ ಕಾಣುವ ಅಸಂಖ್ಯಾತ ನಕ್ಷತ್ರಗಳಿಂದ ಕೂಡಿದ ರಾತ್ರಿಯ ಆಗಸದ ನೋಟ ಮನಸ್ಸಿಗೆ ಮುದನೀಡುವುದು ಹಾಗೂ ಇನ್ನೂ ಗಂಭೀರವಾಗಿ ಚಿಂತಿಸುವವರಿಗೆ ಈ ಬ್ರಹ್ಮಾಂಡವೆಂಬ (ಯೂನಿವರ್ಸ್) ವ್ಯವಸ್ಥೆಯಲ್ಲಿ ನನ್ನ ಅಸ್ತಿತ್ವಕ್ಕೆ ಕಾರಣವೇನು? ಇದರಲ್ಲಿ ನನ್ನ ಪಾತ್ರವೇನು? ಎಂಬ ಬಗ್ಗೆ ಚಿಂತಿಸಲು ಪ್ರೇರೇಪಿಸುವುದು ಸತ್ಯ.

ಮುಪ್ಪಿನಲ್ಲಿ ನಕ್ಷತ್ರವೊಂದು ಪ್ರಚಂಡವಾಗಿ ಸ್ಫೋಟಿಸಿದಾಗ ಮೂಡುವ ದೃಶ್ಯವನ್ನು ಸೆರೆಹಿಡಿಯಬಲ್ಲ ‘ಹಬಲ್’ ಅಂತರಿಕ್ಷ ದೂರದರ್ಶಕದಂತಹ (ಹಬಲ್ ಸ್ಪೇಸ್ ಟೆಲಿಸ್ಕೋಪ್) ಉಪಗ್ರಹಗಳಿಂದ ಬಂದ (ಬಾಣಬಿರುಸುಗಳು ಆಗಸದಲ್ಲಿ ಉಂಟುಮಾಡುವ ದೃಶ್ಯವನ್ನು ನೆನಪಿಗೆ ತರುವ) ಬಣ್ಣದ ಚಿತ್ರಗಳನ್ನು ಕಂಡಾಗ, ಈ ಬ್ರಹ್ಮಾಂಡದ ವ್ಯಾಪ್ತಿಗೆ ಹೋಲಿಸಿದಲ್ಲಿ ನಮ್ಮ ಜ್ಞಾನದಿಗಂತ ಎಷ್ಟು ಸೀಮಿತವಾದುದು ಎಂಬ ನಮ್ರತೆ ಮಾನವನಲ್ಲಿ ಮೂಡುವುದೂ ಅಷ್ಟೇ ಸಹಜ.

## ದೀಪಾವಳಿ ಮತ್ತು ಅಧ್ಯಾತ್ಮ

ಅಂಧಕಾರದ ವಿರುದ್ಧ ಬೆಳಕಿನ ಗೆಲುವಿನ, ಕೆಟ್ಟದ್ದರ ವಿರುದ್ಧ ಒಳ್ಳೆಯದರ ಗೆಲುವಿನ ಹಾಗೂ ಅಜ್ಞಾನದ ವಿರುದ್ಧ ಜ್ಞಾನದ ಗೆಲುವಿನ ಸಂಕೇತವಾದ ದೀಪಾವಳಿಗೆ ‘ಬೆಳಕುಗಳ ಹಬ್ಬ’ (ಫೆಸ್ಟಿವಲ್ ಆಫ್ ಲೈಟ್ಸ್) ಎಂಬ ಹೆಸರಿದೆ. ಬೆಳಕು ದಿನದ ಶುಭಾರಂಭದ, ಜ್ಞಾನದ ಹಾಗೂ ಧನಾತ್ಮಕತೆಯ (ಪಾಸಿಟಿವಿಟಿ) ಸಂಕೇತ. ಇದರಿಂದಾಗಿಯೇ ನಮ್ಮ ‘ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ, ಓಂ ಶಾಂತಿ, ಶಾಂತಿ, ಶಾಂತಿಃ’ (ಅವಾಸ್ತವಿಕತೆಯಿಂದ ವಾಸ್ತವ ಜಗತ್ತಿನೆಡೆ, ಕತ್ತಲೆಯಿಂದ ಬೆಳಕಿನೆಡೆಗೆ ಹಾಗೂ ಐಹಿಕ ಬಂಧನ ಹಾಗೂ ಮರಣ, ಇವು ಅಸ್ತಿತ್ವದಲ್ಲಿರುವ ಈ ಜಗತ್ತಿನಿಂದ ನನ್ನನ್ನು ಅಮರತ್ವದೆಡೆಗೆ ಕೊಂಡೊಯ್ಯಿ’) ಎಂಬ ಪ್ರಾಚೀನ ಪ್ರಾರ್ಥನಾಮಂತ್ರ ಬೆಳಕಿಗೆ ಮಾನವ ನೀಡಿರುವ ಪ್ರಾಮುಖ್ಯವನ್ನು ಸಾರುತ್ತದೆ. ಹೀಗೆ ದೀಪಾವಳಿಯನ್ನು ಆಧ್ಯಾತ್ಮಿಕ, ತತ್ವಜ್ಞಾನಿಯ ದೃಷ್ಟಿಯಿಂದಲೂ, ಭಾವನಾತ್ಮಕವಾಗಿಯೂ ನೋಡಬಹುದು.

ದೀಪಾವಳಿಯ ದಿನಗಳಲ್ಲಿ ಪಟಾಕಿ–ಬಿರುಸುಬಾಣಗಳ ಪ್ರದರ್ಶನವನ್ನು ಆಸ್ವಾದಿಸುವುದು ಶತಶತಮಾನಗಳಿಂದ ಭಾರತೀಯರಿಗೆ ಅಭ್ಯಾಸವಾಗಿದೆ, ಒಂದು ಪ್ರಮುಖ ವಾರ್ಷಿಕ ಉತ್ಸವವಾಗಿದೆ, ನಿಜ. ಆದರೆ ಇದರಿಂದ ಉಂಟಾಗುವ ಶಬ್ದ ಮಾಲಿನ್ಯ ಹಾಗೂ ವಾಯುಮಾಲಿನ್ಯವನ್ನೂ ನಾವು ನೆನಪಿನಲ್ಲಿಟ್ಟುಕೊಂಡು ಜವಾಬ್ದಾರಿಯಿಂದ ವರ್ತಿಸಬೇಕು. ಆಧುನಿಕ ಮಾನವನ ಎಗ್ಗಿಲ್ಲದ ಜೀವನಕ್ರಮದಿಂದಾಗಿ, ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಪರಿಸರಮಾಲಿನ್ಯ ಈ ಜಗತ್ತಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆಯ ಜೊತೆಗೆ ಪೂರ್ವಾಪರದ ಯೋಚನೆಯಿಲ್ಲದೇ, ಇತರರ ಬಗ್ಗೆ ಕಾಳಜಿಯಿಲ್ಲದೇ ಕ್ಷಣಿಕ ಆನಂದಕ್ಕಾಗಿ ಬೇಜವಾಬ್ದಾರಿಯಿಂದ ದೊಡ್ಡ ಪ್ರಮಾಣದಲ್ಲಿ ಪಟಾಕಿ–ಬಿರುಸುಬಾಣಗಳನ್ನು ಬಳಸುವುದು ಸಲ್ಲದು. ಇದರರ್ಥ, ಪಟಾಕಿಗಳನ್ನು ಬಳಸಲೇಬಾರದು ಎಂದಲ್ಲ. ನಮ್ಮ ನಡವಳಿಕೆ, ಸಂಭ್ರಮಾಚರಣೆ ಹಿತಮಿತವಾಗಿದ್ದಲ್ಲಿ ಪರಿಸರದ ಸಂರಕ್ಷಣೆ ಸಾಧ್ಯವಾಗುತ್ತದೆ; ನಮ್ಮ ಮುಂದಿನ ಪೀಳಿಗೆಗೆ ಮಹತ್ತರವಾದ ಪ್ರಯೋಜನ ಆಗಲಿದೆ.

ಪ್ರತಿಕ್ರಿಯಿಸಿ: feedback@sudha.co.in